# ದಾವಣಗೆರೆ ವಿಶ್ವವಿದ್ಯಾನಿಲಯ

ಕಾಲೇಜು ಅಭಿವೃದ್ಧಿ ಪರಿಷತ್ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ – 577 002.

ಸಂಖ್ಯೆ: ದಾವಿವಿ/ಸಿಡಿಸಿ/268/2019-20/ 81/1094 ದಿನಾಂಕ:15.06.2019

*"ದಶಮಾನೋತ್ಸವ ಶೈಕ್ಷಣಿಕ ವರ್ಷ 2018–19"*

## ಅಧಿಕೃತ ಜ್ಞಾಪನ

ವಿಷಯ : ಶ್ರೀ ಮಾಲತೇಶ ಶಿಕ್ಷಣ ಮಹಾವಿದ್ಯಾಲಯ, ಮಲೆಬೆನ್ನೂರು – ಈ ಕಾಲೇಜಿನ 2019–20ನೇ ಶೈಕ್ಷಣಿಕ ಸಾಲಿನ ಮುಂದುವರಿಕೆ ಸಂಯೋಜನೆ ಕುರಿತು.

ಉಲ್ಲೇಖ :
1. ಕಾಲೇಜಿನ ಪತ್ರ ದಿನಾಂಕ:02.05.2019.
2. ವಿ.ವಿ. ಪತ್ರ ಸಂ:ದಾವಿವಿ/ಸಿಡಿಸಿ/808/2018–19/23/842, ದಿನಾಂಕ:17.05.2019
3. ಕಾಲೇಜಿನ ಪತ್ರ ಸಂ:229/2019–20, ದಿನಾಂಕ:20.05.2019.
4. ದಿನಾಂಕ:24.05.2019ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯ.
5. ವಿ.ವಿ. ಪತ್ರ ಸಂ:ದಾವಿವಿ/ಸಿಡಿಸಿ/268/2019–20/32/1038, ದಿನಾಂಕ:27.05.2019.
6. ವಿ.ವಿ. ಪತ್ರ ಸಂ:ದಾವಿವಿ/ಸಿಡಿಸಿ/268/2019–20/34/10470, ದಿನಾಂಕ:27.05.2019.
7. ಶ್ರೀ ಮಾಲತೇಶ ಶಿಕ್ಷಣ ಮಹಾವಿದ್ಯಾಲಯ, ಮಲೆಬೆನ್ನೂರು ಈ ಕಾಲೇಜಿನ ಮೊಕದ್ದಮೆ ಸಂಖ್ಯೆ: 22749–22799/2019 (EDN-RES)ಕ್ಕೆ ಸಂಬಂಧಿಸಿದಂತೆ, ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ದಿನಾಂಕ:03.06.2019.
8. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:14.06.2019.

**ಪ್ರಸ್ತಾವನೆ:**

1) ಉಲ್ಲೇಖ (1)ರ ಪತ್ರದಲ್ಲಿ ಪ್ರಾಂಶುಪಾಲರು, ಶ್ರೀ ಮಾಲತೇಶ ಶಿಕ್ಷಣ ಮಹಾವಿದ್ಯಾಲಯ, ಮಲೆಬೆನ್ನೂರು– ಈ ಕಾಲೇಜಿನ 2018–19 & 2019–20ನೇ ಶೈಕ್ಷಣಿಕ ಸಾಲಿನ ಮುಂದುವರಿಕೆ ಸಂಯೋಜನೆಗೆ ಅದೇಶ ನೀಡಲು ಮನವಿ ಮಾಡಿಕೊಂಡಿರುತ್ತಾರೆ.

2) ವಿಶ್ವವಿದ್ಯಾನಿಲಯದ ಉಲ್ಲೇಖ (2)ರಲ್ಲಿ ಮಾನ್ಯ ಕುಲಪತಿಗಳ ಅದೇಶದ ಮೇರೆಗೆ, ಶ್ರೀ ಮಾಲತೇಶ ಶಿಕ್ಷಣ ಮಹಾವಿದ್ಯಾಲಯ, ಮಲೆಬೆನ್ನೂರು – ಈ ಕಾಲೇಜಿನ 2019–20ನೇ ಶೈಕ್ಷಣಿಕ ಸಾಲಿನ ಮುಂದುವರಿಕೆ ಸಂಯೋಜನೆ ಸಂಬಂಧ ಕಳೆದ ಶೈಕ್ಷಣಿಕ ಸಾಲುಗಳಲ್ಲಿ ಸ್ಥಳೀಯ ತಪಾಸಣ ಸಮಿತಿಯು ವ್ಯಕ್ತಪಡಿಸಿರುವ ನ್ಯೂನತೆಗಳು / ಆಕ್ಷೇಪಣೆಗಳಿಗೆ ಅನುಪಾಲನ ವರದಿಯನ್ನು ಹಾಗೂ ಇತರೆ ದಾಖಲಾತಿಗಳನ್ನು ಸಲ್ಲಿಸುವಂತೆ ಸೂಚಿಸಿ ಸದರಿ ಕಾಲೇಜಿನ ಪ್ರಾಂಶುಪಾಲರಿಗೆ ಪತ್ರ ಬರೆಯಲಾಗಿತ್ತು.

3) ಉಲ್ಲೇಖ (3)ರ ಪತ್ರದಲ್ಲಿ ಪ್ರಾಂಶುಪಾಲರು, ಶ್ರೀ ಮಾಲತೇಶ ಶಿಕ್ಷಣ ಮಹಾವಿದ್ಯಾಲಯ, ಮಲೆಬೆನ್ನೂರು– ಇವರು ಕಳೆದ ಶೈಕ್ಷಣಿಕ ಸಾಲುಗಳಲ್ಲಿ ವಿಶ್ವವಿದ್ಯಾನಿಲಯದ ಸ್ಥಳೀಯ ಪರಿಶೀಲನಾ ಸಮಿತಿಯು ವ್ಯಕ್ತಪಡಿಸಿರುವ ನ್ಯೂನತೆಗಳು / ಆಕ್ಷೇಪಣೆಗಳಿಗೆ ಹಾಗೂ ಇತರೆ ಮಾಹಿತಿಗಳಿಗೆ ಅನುಪಾಲನ ವರದಿಯನ್ನು ಸಲ್ಲಿಸಿರುತ್ತಾರೆ.

..2



CS Scanned with CamScanner

Scanned with CamScanner

4) ಈ ವಿಷಯವನ್ನು ಉಲ್ಲೇಖ (4)ರನ್ವಯ ದಿನಾಂಕ:24.05.2019ರಂದು ಜರುಗಿದ ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಟಿಪ್ಪಣಿಯನ್ನು ಮಂಡಿಸಲಾಗಿತ್ತು. ಸದರಿ ಸಭೆಯಲ್ಲಿ ಕೂಲಂಕುಷವಾಗಿ ಪರಿಶೀಲಿಸಿ ಚರ್ಚಿಸಿದ ನಂತರ ಶ್ರೀ ಮಾಲತೇಶ ಬಿ.ಇಡಿ., ಕಾಲೇಜಿನ ಪ್ರಾಂಶುಪಾಲರು/ಆಡಳಿತ ಮಂಡಳಿಯ ಕೋರಿಕೆಯನ್ವಯ ವಿಶ್ವವಿದ್ಯಾನಿಲಯದ ಸ್ಥಳೀಯ ಪರಿಶೀಲನಾ ಸಮಿತಿಯನ್ನು ಕಾಲೇಜಿನ ಭೌತಿಕ ಪರಿಶೀಲನೆಗಾಗಿ ನಿಯೋಜಿಸಲು ನಿರ್ಣಯಿಸಿರುತ್ತದೆ.

5) ಸದರಿ ದಿನಾಂಕ:24.05.2019ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದನುಸಾರ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಶ್ರೀ ಮಾಲತೇಶ ಶಿಕ್ಷಣ ಮಹಾವಿದ್ಯಾಲಯ, ಮಲೆಬೆನ್ನೂರು- ಇಲ್ಲಿಗೆ ಈ ಹಿಂದಿನ ಸ್ಥಳೀಯ ಪರಿಶೀಲನಾ ಸಮಿತಿಗಳು ಕಾಲೇಜಿಗೆ ಭೇಟಿ ನೀಡಿ, ವ್ಯಕ್ತಪಡಿಸಿದ ನ್ಯೂನತೆಗಳು / ಆಕ್ಷೇಪಣೆಗಳಿಗೆ ಕಾಲೇಜು ವತಿಯಿಂದ ಸಲ್ಲಿಸಲಾಗಿದ್ದ ಅನುಪಾಲನ ವರದಿಗಳ ಭೌತಿಕ ಪರಿಶೀಲನೆಗಾಗಿ ದಿನಾಂಕ:29.05.2019ರಂದು ಪುನ: ವಿಶ್ವವಿದ್ಯಾನಿಲಯದ ಸ್ಥಳೀಯ ಪರಿಶೀಲನಾ ಸಮಿತಿಯನ್ನು ಕಾಲೇಜಿನ ಸರ್ವತೋಮುಖ ಅಭಿವೃದ್ಧಿಯ ಬಗ್ಗೆ ಪರಿಶೀಲನೆಗೆ ನಿಯೋಜಿಸಲಾಗಿತ್ತು. ಸದರಿ ಪರಿಶೀಲನಾ ಸಮಿತಿಯು ಕಾಲೇಜಿಗೆ ಭೇಟಿ ನೀಡಿ, ಕಾಲೇಜಿನ ಭೌತಿಕ ಪರಿಶೀಲನೆ ನಡೆಸಿ, ಸಲ್ಲಿಸಿರುವ ತನ್ನ ವರದಿಯಲ್ಲಿ 2019-20ನೇ ಶೈಕ್ಷಣಿಕ ಸಾಲಿನ ಕಾಲೇಜಿನ ಸಂಯೋಜನೆ ಮುಂದುವರಿಕೆಗೆ ಶಿಫಾರಸ್ಸು ಮಾಡಿರುತ್ತದೆ ಹಾಗೂ ಇನ್ನು ಕೆಲವು ಷರತ್ತುಗಳನ್ನು ಸಹ ವ್ಯಕ್ತಪಡಿಸಿರುತ್ತದೆ.

6) ಏತನ್ಮಧ್ಯೆ, ಶ್ರೀ ಮಾಲತೇಶ ಶಿಕ್ಷಣ ಮಹಾವಿದ್ಯಾಲಯ, ಮಲೆಬೆನ್ನೂರು-ಈ ಕಾಲೇಜಿನ ಮೊಕದ್ದಮೆ ಸಂಖ್ಯೆ:22201-22851/2019(EDN-RES) ಸಂಬಂಧಿಸಿಂತೆ, ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:03.06.2019ರಂದು ನೀಡಿರುವ ಆದೇಶದ ಪ್ಯಾರ (iv)ರಲ್ಲಿ ಶ್ರೀ ಮಾಲತೇಶ ಶಿಕ್ಷಣ ಮಹಾವಿದ್ಯಾಲಯ, ಮಲೆಬೆನ್ನೂರು -ಇವರು ವಿಶ್ವವಿದ್ಯಾನಿಲಯಕ್ಕೆ ದಿನಾಂಕ:04.10.2017ರಂದು ಸಲ್ಲಿಸಿರುವ (ಅನುಬಂಧ E ಮತ್ತು E1) ಮನವಿಯನ್ನು ವಿಶ್ವವಿದ್ಯಾನಿಲಯದ ನಿಯಮಗಳನುಸಾರ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ದಿನಾಂಕದಿಂದ (10) ದಿನದೊಳಗೆ ಸ್ಥಳೀಯ ಪರಿಶೀಲನಾ ಸಮಿತಿಯನ್ನು ನಿಯೋಜಿಸಿ ಪರಿಶೀಲಿಸುವ ಬಗ್ಗೆ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಿರುತ್ತದೆ.

ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ, ಈಗಾಗಲೆ ವಿಶ್ವವಿದ್ಯಾನಿಲಯದ ಸ್ಥಳೀಯ ಪರಿಶೀಲನಾ ಸಮಿತಿಯ ಶಿಫಾರಸ್ಸು ವರದಿಯ ಆಧಾರದ ಮೇರೆಗೆ, ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳ ಅನುಮೋದನೆಯನ್ನು ಕಾಯ್ದಿರಿಸಿ, ಶ್ರೀ ಮಾಲತೇಶ ಶಿಕ್ಷಣ ಮಹಾವಿದ್ಯಾಲಯ, ಮಲೆಬೆನ್ನೂರು-ಈ ಕಾಲೇಜಿಗೆ 2019-20ನೇ ಶೈಕ್ಷಣಿಕ ಸಾಲಿನ ಮುಂದುವರಿಕೆ ಸಂಯೋಜನೆಯನ್ನು ಮಂಜೂರು ಮಾಡಲು ಮಾನ್ಯ ಕುಲಪತಿಗಳು ಉಲ್ಲೇಖ (08)ರಲ್ಲಿ ಅನುಮೋದನೆ ನೀಡಿರುವುದರಿಂದ ಈ ಕೆಳಕಂಡ ಅಧಿಕೃತ ಜ್ಞಾಪನ ಹೊರಡಿಸಲಾಗಿದೆ

**ಅಧಿಕೃತ ಜ್ಞಾಪನ ಸಂ:ದಾವಿವಿ/ಸಿಡಿಸಿ/268/2019-20/ ದಿನಾಂಕ:15.06.2019.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಹಾಗು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಸೆಕ್ಸನ್ 59(17)ರನ್ವಯ ಮತ್ತು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಅನುಮೋದನೆಯನ್ನು ಕಾಯ್ದಿರಿಸಿ, ಶ್ರೀ ಮಾಲತೇಶ ಶಿಕ್ಷಣ ಮಹಾವಿದ್ಯಾಲಯ, ಮಲೆಬೆನ್ನೂರು-ಈ ಕಾಲೇಜಿಗೆ 2019-20ನೇ ಶೈಕ್ಷಣಿಕ ಸಾಲಿನ ಅವಧಿಗೆ ಮಾತ್ರ ಈ ಕೆಳಕಂಡಂತೆ ಸಂಯೋಜನೆಯನ್ನು ಮುಂದುವರೆಸಲಾಗಿದೆ.



Scanned with CamScanner

Scanned with CamScanner

| ಪದವಿ | ಭಾಷೆ | ಐಚ್ಛಿಕ ವಿಷಯ ಸಮೂಹಗಳು | ಪ್ರವೇಶ ಮಿತಿ | ವಿಭಾಗ |
|---|---|---|---|---|
| ಬಿ.ಇಡಿ., | ಕನ್ನಡ, ಇಂಗ್ಲೀಷ್ | ಕಡ್ಡಾಯ ವಿಷಯಗಳು | 100 | 50+2 ಯೂನಿಟ್ |

ವಿಶ್ವವಿದ್ಯಾನಿಲಯದ ಸ್ಥಳೀಯ ಪರಿಶೀಲನಾ ಸಮಿತಿಯ ಶಿಫಾರಸ್ಸು ಮೇರೆಗೆ, ಷರತ್ತುಗಳನ್ನು ಕಾರ್ಯಗತಗೊಳಿಸಿ ಪೂರಕ ದಾಖಲೆಗಳು/ಮಾಹಿತಿಗಳೊಂದಿಗೆ ಅನುಪಾಲನ ವರದಿಯನ್ನು ದಿನಾಂಕ:30.09.2019ರೊಳಗಾಗಿ ವಿಶ್ವವಿದ್ಯಾನಿಲಯಕ್ಕೆ ಕಡ್ಡಾಯವಾಗಿ ಸಲ್ಲಿಸಲು ಆದೇಶಿಸಲಾಗಿದೆ.

ಸಂಯೋಜನಾ ವರದಿ ಪ್ರತಿ ಲಗತ್ತಿಸಿದೆ.

ಆದೇಶದ ಮೇರೆಗೆ,

ಕುಲಸಚಿವರು.
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577 002

ಗೆ:
ಪ್ರಾಂಶುಪಾಲರು, ಶ್ರೀ ಮಾಲತೇಶ ಶಿಕ್ಷಣ ಮಹಾವಿದ್ಯಾಲಯ, ಸಂತೆ ರಸ್ತೆ, ಮಲೆಬೆನ್ನೂರು-577 530, ಹರಿಹರ ತಾಲ್ಲೂಕು.

ಪ್ರತಿಗಳು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು – 560 001.
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು – 560 001.
3. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಸಹ್ಯಾದ್ರಿ ಕಾಲೇಜು ಆವರಣ, ಶಿವಮೊಗ್ಗ – 577 201.
4. ಕುಲಸಚಿವರು(ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – 577 002
5. ಉಪಕುಲಸಚಿವರು(ಶೈಕ್ಷಣಿಕ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ–577 002
6. ಕಛೇರಿ ಪ್ರತಿ.

Scanned with CamScanner



Scanned with CamScanner